ಹಾಸನ, ಕೊಡಗು, ಚಿಕ್ಕಮಗಳೂರು ಹಾಗೂ ಬೆಂಗಳೂರು ಮಹಾನಗರದಲ್ಲಿ ಕಿಯೋಸ್ಕ ಸ್ಥಾಪನೆ ಮುಖಾಂತರ ಹಮ್ಮಿಕೊಂಡಿದೆ. ಹಾಗೆಯೇ ಮಿಾನನ್ನು ತಾಜಾ ರೀತಿಯಲ್ಲಿ ನಿರ್ವಹಿಸಿ ಆರೋಗ್ಯವಾಗಿ ಮಾರುಕಟ್ಟೆಗೆ ಸಾಗಿಸಿ ಮಾರಾಟ ಮಾಡಲು ಬೇಕಾಗುವ ಬೈಸಿಕಲ್ ಮತ್ತು ಶಾಖ ನಿರೋಧಕ ಪೆಟ್ಟಿಗೆಗಳನ್ನು ಒದಗಿಸಲು ನೆರವು ನೀಡಲಾಗುತ್ತಿದೆ.

ಮತ್ಸ್ಯವಾಹಿನಿ ಯೋಜನೆಯಡಿ ತಾಜಾ ಮಿಾನನ್ನು ಸಾಗಾಣಿಕೆ ಮಾಡಲು ತ್ರಿಚಕ್ರ ಟೆಂಪೋ ರಿಕ್ಷ ಖರೀದಿಸಲು ರೂ:25000-00ಗಳ ಸಹಾಯ ಧನವನ್ನು ಫಲಾನುಭವಿಗಳಿಗೆ ನೀಡುವ ಉದ್ದೇಶದಿಂದ ರೂ:5.00ಲಕ್ಷ ಆಯವ್ಯಯ ಒದಗಿಸಿಕೊಳ್ಳಲಾಗಿದೆ.

ತುಮಕೂರು-ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ.

568(621)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುಮಕೂರು-ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಹಣದ ಕೊರತೆಯಿಂದ ಕಾಮಗಾರಿಗಳು ಕುಂಠಿತಗೊಂಡಿರುವುದು ನಿಜವೇ?

ಆ. ಈ ರಾಷ್ಟ್ರೀಯ ಹೆದ್ದಾರಿಯನ್ನು ಸರ್ಕಾರ ಘೋಷಿಸಿದ್ದು ಯಾವಾಗ? ಈ ರಸ್ತೆಯ ಉದ್ದ ಎಷ್ಟು? ಕಾಮಗಾರಿ ಮೊತ್ತವೆಷ್ಟು? ಈಗಾಗಲೇ ಎಷ್ಟು ಸಾಗಿದೆ? ಪೂರ್ಣಗೊಳ್ಳಲು ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೇ?

ಇ. ಇದಕ್ಕೆ ಪೂರಕವಾಗಿ ರಸ್ತೆ ಪರಿವರ್ತನಾ ಕಾರ್ಯ ಆರಂಭವಾಗಿದೆಯೇ? ಎಷ್ಟು ಕಿ.ಮಿಾ. ರಸ್ತೆ ಕೆಲಸ ಪೂರ್ಣಗೊಂಡಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ಇಲ್ಲ.

ಆ. ಈ ರಾಷ್ಟ್ರೀಯ ಹೆದ್ದಾರಿಯನ್ನು ದಿ: 6-1-1999ರಂದು ಕೇಂದ್ರ ಸರ್ಕಾರ ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸಿತು. ಈ ಹೆದ್ದಾರಿಯು ಒಟ್ಟು 365 ಕಿಮಿಾ.

ಉದ್ದ ಇರುತ್ತದೆ. ಕಾಮಗಾರಿಗಳ ಅಂದಾಜು ಮೊತ್ತ 22.82 ಕೋಟಿ ರೂ.ಗಳಷ್ಟು ಇರುತ್ತದೆ. ಇದುವರೆವಿಗೂ 76 ಕಿಮಿ. ಸಾಗಿದೆ. ಕಾಮಗಾರಿಗಳನ್ನು ಮಾರ್ಚ್ 2001ರೊಳಗೆ ಪೂರ್ಣಗೊಳಿಸಲು ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆ.

ಇ. ಹಾಲಿ ಇರುವ ಸಂಚಾರ ಪಥವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಇದುವರೆಗೂ 76 ಕಿ.ಮೀ. ರಸ್ತೆ ಪೂರ್ಣಗೊಂಡಿದೆ.

ಬೆಂಗಳೂರು ನಗರದಲ್ಲಿ ಮಸೀದಿಗಳ ದುರಸ್ತಿ.

569(741)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಮಸೀದಿಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ, ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಮಸೀದಿಗಳೆಷ್ಟು?

ಇ) ಈ ಮಸೀದಿಗಳ ದುರಸ್ತಿ ಮತ್ತು ನವೀಕರಣಕ್ಕಾಗಿ ಹಾಗೂ ಇತರೆ ಸೌಲಭ್ಯಗಳಾದ ಕುಡಿಯುವ ನೀರು ಇತ್ಯಾದಿ ಒದಗಿಸಲು 2000-2001ನೇ ಸಾಲಿನಲ್ಲಿ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಎ.ಎಂ.ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

ಅ) ಬೆಂಗಳೂರು ನಗರದಲ್ಲಿ 160 ಮಸೀದಿಗಳಿವೆ.

ಆ) ಈ ಪೈಕಿ ಶಿವಾಜಿನಗರ ಮತಕ್ಷೇತ್ರದಲ್ಲಿ 21 ಮಸೀದಿಗಳಿವೆ.

ಇ) ಸರ್ಕಾರವು 2000-2001ನೇ ಸಾಲಿನಲ್ಲಿ ಬೆಂಗಳೂರು ನಗರದ 10 ಮಸೀದಿಗಳಿಗೆ ರೂ.3,90,000-00ಗಳನ್ನು ದುರಸ್ತಿ ಹಾಗೂ ಜೀರ್ಣೋದ್ಧಾರಕ್ಕಾಗಿ ಮಂಜೂರು ಮಾಡಿದೆ. 2000-2001ನೇ ಸಾಲಿನಲ್ಲಿ ಈವರೆಗೆ ಹಣ ಮಂಜೂರಾತಿಯಾಗಿರುವುದಿಲ್ಲ.

ರಾಜ್ಯದ ಅಭಯಾರಣ್ಯ ವ್ಯಾಪ್ತಿಯಲ್ಲಿ ಆನೆಗಳ ಹತ್ಯೆ.